## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀಮತಿ ಎಸ್.ಅಂಬಿಕಾ, ಅಧ್ಯಕ್ಷರು, ಬುರುಜನರೊಪ್ಪ ಗ್ರಾಮ ಪಂಚಾಯತಿ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ) ಮತ್ತು 48(4) ರನ್ವಯ ಕ್ರಮ ಜರುಗಿಸುವ ಬಗ್ಗೆ.

ಓದಲಾಗಿದೆ:

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ ಚಿತ್ರದುರ್ಗ ಇವರ ಪತ್ರ ಸಂಖ್ಯೆ:ಜಿಪಂ/ಆ(3)/ಸಿಸಿಎ/ಸಿಆರ್-24/2017-18, ದಿನಾಂಕ:25-05-2017.
2) ಇದೇ ಸಮಸಂಖ್ಯೆಯ ಕಾರಣ ಕೇಳುವ ನೋಟಿಸ್ ದಿನಾಂಕ:01-07-2017.
3) ಶ್ರೀಮತಿ ಎಸ್.ಅಂಬಿಕಾ, ಅಧ್ಯಕ್ಷರು, ಬುರುಜನರೊಪ್ಪ ಗ್ರಾಮ ಪಂಚಾಯತಿ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರ ಲಿಖಿತ ಹೇಳಿಕೆ ದಿನಾಂಕ:21-07-2017 ಮತ್ತು 23-10-2017.
4) ಸರ್ಕಾರದ ಸಮಸಂಖ್ಯೆಯ ವಿಚಾರಣಾ ನೋಟೀಸ್ ದಿನಾಂಕ:06-12-2017.
5) ರಿಟ್ ಅರ್ಜಿ ಸಂಖ್ಯೆ:44480/2017 ರಲ್ಲಿ ಮಾನ್ಯ ಉಚ್ಛ ನ್ಯಾಯಾಲಯದ ಅಂತಿಮ ಆದೇಶ ದಿನಾಂಕ:23-10-2018.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕು ಬುರುಜನರೊಪ್ಪ ಗ್ರಾಮ ಪಂಚಾಯತಿಯ ವಿಶೇಷ ಲೆಕ್ಕ ತಪಾಸಣೆಯನ್ನು ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್ ಚಿತ್ರದುರ್ಗ ರವರು ಕೈಗೊಂಡು ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ ಆಕ್ಷೇಪಣಾ ಮೊತ್ತ ರೂ. 26,62,457/-ಮತ್ತು ವಸೂಲಾತಿ ಮೊತ್ತ ರೂ. 2,45,296/-ಹಾಗೂ ಇತರ ನ್ಯೂನತೆಗಳ ಕುರಿತು ಈ ಕೆಳಕಂಡಂತೆ ವಿವರಿಸಿರುತ್ತಾರೆ.

- 2016-17ನೇ ಸಾಲಿಗೆ ಬಿ.ಆರ್.ಜಿ.ಎಫ್ ಯೋಜನೆಯಲ್ಲಿ ರೂ. 2,03,657/-ಗಳನ್ನು ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿ ಚಿತ್ರದುರ್ಗ ಇವರಿಗೆ ನೀಡಿದ್ದು, ವೆಚ್ಚ ಭರಿಸಿದ ಬಗ್ಗೆ ಅನುಷ್ಠಾನಾಧಿಕಾರಿಗಳಿಂದ ಹಣ ಬಳಕೆ ಪ್ರಮಾಣ ಪತ್ರವನ್ನು ಪಡೆಯದೇ ಇರುವುದರಿಂದ ಮತ್ತು ವೆಚ್ಚ ಭರಿಸಿದ ಬಗ್ಗೆ ದಾಖಲಾತಿಗಳನ್ನು ವಿಶೇಷ ಲೆಕ್ಕ ತನಿಖೆಗೆ ಹಾಜರುಪಡಿಸದೇ ಇರುವ ಮೊತ್ತ ರೂ. 2,03,657/-.
- 13ನೇ ಹಣಕಾಸು ಯೊಜನೆಯಲ್ಲಿ ಸುಟ್ಟು ಹೋದ ಕುಡಿಯುವ ನೀರಿನ ಮೋಟಾರ್ ಮತ್ತು ಪಂಪ್‌ಗಳ ದುರಸ್ಥಿ ಹಣದ ಧನಾದೇಶವನ್ನು ಸಂಸ್ಥೆಯ ಹೆಸರಿಗೆ ನೀಡದೆ ರೂ. 18,650/-ಗಳನ್ನು ಶ್ರೀ ವಿ.ಎಸ್.ರುದ್ರಪ್ಪ ಇವರ ಹೆಸರಿಗೆ ನೀಡಿರುವುದು. ಆದಾಯ ತೆರಿಗೆ ಮೊತ್ತ ರೂ. 6,106/-ಗಳನ್ನು ಕಟಾಯಿಸದೆ ಇರುವುದು.
- 13ನೇ ಹಣಕಾಸು ಯೋಜನೆಯಲ್ಲಿ ರೂ. 1,20,389/-ಗಳನ್ನು ವೆಚ್ಚ ಭರಿಸಿದ ಮೊತ್ತಕ್ಕೆ ಆದಾಯ ತೆರಿಗೆಯನ್ನು ಕಟಾಯಿಸದೆ ಇರುವುದು. ಕಾಮಗಾರಿ ವಹಿ ನಿರ್ವಹಿಸದೆ ಇರುವುದು, ದಾಸ್ತಾನು ಹಾಗೂ ವಿತರಣೆ ವಹಿಯನ್ನು ನಿರ್ವಹಿಸದೇ ಇರುವುದು.
- 14ನೇ ಹಣಕಾಸು ಯೋಜನೆ ಅಡಿಯಲ್ಲಿ 2016-17 ಸಾಲಿಗೆ ರೂ. 22,27,731/-ಗಳಿಗೆ ವೆಚ್ಚ ಭರಿಸಿದ್ದು, ಕೊಟೇಶನ್, ಟೆಂಡರ್ ಕರೆದಿರುವುದಿಲ್ಲ. ಆದಾಯ ತೆರಿಗೆ ರೂ. 15,695/- ಗಳನ್ನು ಕಟಾಯಿಸಿರುವುದಿಲ್ಲ.
- ಶ್ರೀ ಜಿ.ಎ.ವೀರಣ್ಣ, ಹಿಂದಿನ ಪಿ.ಡಿ.ಓ. ಇವರು ದಿನಾಂಕ:10-02-2017 ರಂದು ಅಮಾನತ್ತುಗೊಂಡಿದ್ದರೂ ಸಹ ದಿನಾಂಕ:13-02-2017 ರಂದು 14ನೇ ಹಣಕಾಸು ಯೋಜನೆಯಡಿಯಲ್ಲಿ ರೂ.2,08,372/-ಗಳನ್ನು 07 ಧನಾದೇಶಗಳ ಮೂಲಕ ಡ್ರಾ ಮಾಡಿರುವುದು ನಿಯಮಬಾಹಿರವಾಗಿರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ, ವಿಶೇಷ ಲೆಕ್ಕ ತಪಾಸಣಾ ವರದಿಯಲ್ಲಿ ವಿವರಿಸಿರುವಂತೆ ಶ್ರೀಮತಿ ಎಸ್.ಅಂಬಿಕಾ, ಅಧ್ಯಕ್ಷರು ಇವರೂ ಸಹ ಸದರಿ ಅಕ್ರಮಗಳಲ್ಲಿ ಸಮಭಾಗಿಯಾಗಿರುವ ಮೇರೆಗೆ ಸದರಿ ಶ್ರೀಮತಿ

ಎಸ್.ಅಂಬಿಕಾ, ಅಧ್ಯಕ್ಷರು, ಬುರುಜನರೊಪ್ಪ ಗ್ರಾಮ ಪಂಚಾಯತಿ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಕಾಯ್ದೆ 43(ಎ) ರಡಿಯಲ್ಲಿ ಸೂಕ್ತ ಕ್ರಮ ಜರುಗಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಚಿತ್ರದುರ್ಗ ರವರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ರನ್ವಯ ಗ್ರಾಮ ಪಂಚಾಯತಿ ಸದಸ್ಯ ಸ್ಥಾನದಿಂದ ಏಕೆ ವಜಾ ಮಾಡಬಾರದು ಎಂಬುದರ ಬಗ್ಗೆ 15 ದಿನಗಳೊಳಗಾಗಿ ವಿವರಣೆ ನೀಡುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಶ್ರೀಮತಿ ಎಸ್.ಅಂಬಿಕಾ, ಅಧ್ಯಕ್ಷರು, ಬುರುಜನರೊಪ್ಪ ಗ್ರಾಮ ಪಂಚಾಯತಿ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ರವರಿಗೆ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ಶ್ರೀಮತಿ ಎಸ್.ಅಂಬಿಕಾ, ಅಧ್ಯಕ್ಷರು, ಬುರುಜನರೊಪ್ಪ ಗ್ರಾಮ ಪಂಚಾಯತಿ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರು ಸರ್ಕಾರದಿಂದ ನಿಡಲಾದ ಕಾರಣ ಕೇಳಿ ನೋಟೀಸಿಗೆ ಈ ಕೆಳಗಿನಂತೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

"ವಿಶೇಷ ಲೆಕ್ಕ ತಪಾಸಣೆಯಲ್ಲಿ ರೂ.26,62,457/-ಗಳ ಆಕ್ಷೇಪಣೆ ಮೊತ್ತ ಹಾಗೂ ರೂ.2,45,296/-ಗಳನ್ನು ವಸೂಲಾತಿಗೆ ಇಡಲಾಗಿದ್ದು, ಆಕ್ಷೇಪಣೆಯಲ್ಲಿ ಇಟ್ಟಿರುವ ಮೊತ್ತಕ್ಕೆ ಸಂಬಂಧಿಸಿದಂತೆ ಯೋಜನೆಗಳ ಕಾಮಗಾರಿಗಳನ್ನು ಅನುಮೋದನೆಯನ್ನು ಪಡೆದು, ನಿಯಮಾನುಸಾರ ಮಾಡಲಾಗಿರುತ್ತದೆ. ಇದಕ್ಕೆ ಸಂಬಂದಿಸಿದ ಎಲ್ಲಾ ವೋಚರ್‌ಗಳನ್ನು ತೋರಿಸಿದ್ದರೂ ಸಹಾ ಲೆಕ್ಕಪರಿಶೋಧಕರು ಓಚರ್‌ಗಳನ್ನು ಗಣನೆಗೆ ಪಡೆಯದೆ ಆಕ್ಷೇಪಣೆಯಲ್ಲಿ ಇಟ್ಟಿರುತ್ತಾರೆ ಹಾಗೂ ಇದಕ್ಕೆ ಸಂಬಂಧಪಟ್ಟಂತೆ ದಾಸ್ತಾನು ಮತ್ತು ವಿತರಣಾ ವಹಿಯನ್ನು ಇಡಲಾಗಿರುತ್ತದೆ. ಹಾಗಾಗಿ ಪುನರ್ ಪರಿಶೀಲನೆ ಮಾಡುವಂತೆ ಕೋರಿರುತ್ತಾರೆ. ಇನ್ನೂ ರೂ.2,45,296/-ಗಳ ವಸೂಲಾತಿಗೆ ಸಂಬಂಧಿಸಿದಂತೆ ಆದಾಯ ತೆರಿಗೆ ರೂ.16,000/-ಗಳನ್ನು ಹಾಗೂ 13ನೇ ಹಣಕಾಸಿನ ಆದಾಯ ತೆರಿಗೆ ರೂ. 6106/-ಗಳನ್ನು ಸರ್ಕಾರಕ್ಕೆ ಜಮೆ ಮಾಡಲಾಗಿದೆ ಎಂದು ತಿಳಿಸಿರುತ್ತಾರೆ.

ಬಿ.ಆರ್.ಜಿ.ಎಫ್ ಯೋಜನೆ 2015-16ನೇ ಸಾಲಿಗೆ ರೂ. 2,03,657/-ಗಳನ್ನು ಕಾರ್ಯಪಾಲಕ ಇಂಜಿನಿಯರ್, ಉಪವಿಭಾಗ ಚಿತ್ರದುರ್ಗ ಇವರಿಗೆ ಚೆಕ್ ಮೂಲಕ ಹಣ ನೀಡಲಾಗಿರುತ್ತದೆ. ಆದರೆ ಲೆಕ್ಕಪತ್ರ ಶಾಖೆಯವರು ಯು.ಸಿ. ನೀಡಿಲ್ಲವೆಂದು ಈ ಹಣವನ್ನೂ ಸಹ ಆಕ್ಷೇಪಣೆಯಲ್ಲಿ ಇಟ್ಟಿರುತ್ತಾರೆ. ಇದಕ್ಕೆ ಸಂಬಂಧಪಟ್ಟಂತೆ ಯು.ಸಿ.ಯ ಜೆರಾಕ್ಸ್ ಪ್ರತಿ ಲಗತ್ತಿಸಿರುತ್ತಾರೆ.

ಪಿ.ಡಿ.ಓ. ಜಿ.ಎ.ವೀರಣ್ಣನವರು ಅಮಾನತ್ತುಗೊಂಡಿರುವ ಬಗ್ಗೆ ತಮಗೆ ಯಾವುದೇ ಮಾಹಿತಿಯನ್ನು ಮೇಲಾಧಿಕಾರಿಯವರು ತಿಳಿಸಿರುವುದಿಲ್ಲ. ಎಂದಿನಂತೆ ಪಿ.ಡಿ.ಓ ರವರು ಚೆಕ್‌ಗಳನ್ನು ಸಹಿಗಾಗಿ ಇಟ್ಟಿದ್ದು, ಆ ಸಂದರ್ಭದಲ್ಲಿ 4 ಚೆಕ್‌ಗಳಿಗೆ ಮಾತ್ರ ಸಹಿ ಹಾಕಿರುತ್ತೇನೆ. ಅಷ್ಟರಲ್ಲಿ ಮತ್ತೊಬ್ಬ ಪಿ.ಡಿ.ಓರವರು ಕಛೇರಿಗೆ ಹಾಜರಾಗಿ ಮೊದಲಿನ ಪಿ.ಡಿ.ಓ ರವರು ಅಮಾನತ್ತುಗೊಂಡಿರುವ ಬಗ್ಗೆ ತಿಳಿಸಿದ ಮೇರೆಗೆ 3 ಚೆಕ್‌ಗಳನ್ನು ತಿರಸ್ಕರಿಸಿರುವುದಾಗಿ ತಿಳಿಸಿರುತ್ತಾರೆ.

ಪಿ.ಡಿ.ಓ ರವರು ಅಮಾನತ್ತುಗೊಂಡ ಕೂಡಲೇ ಮತ್ತೊಬ್ಬ ಪಿಡಿಓರವರನ್ನು ನೇಮಕ ಮಾಡಿ ಆದೇಶ ಹೊರಡಿಸುವ ಜವಾಬ್ದಾರಿ ಮೇಲಾಧಿಕಾರಿಯವರದ್ದಾಗಿರುತ್ತದೆ. ಈ ಮಾಹಿತಿಯನ್ನು ಬ್ಯಾಂಕ್‌ಗಳಿಗೆ ನೀಡಲು ನಿಯಮದಲ್ಲಿ ಅವಕಾಶವಿರುತ್ತದೆ. ನಾನು ಈ ವ್ಯವಹಾರ ಮಾಡುವಲ್ಲಿ ಯಾವುದೇ ಅವ್ಯವಹಾರ ಮಾಡಿರುವುದಿಲ್ಲ. ಮುಖ್ಯ ಲೆಕ್ಕಾಧಿಕಾರಿಗಳು ತನಿಖೆ ಮಾಡಿದ ನಂತರ ನನಗೆ ಯಾವುದೇ ನೋಟೀಸನ್ನು ನೀಡಿರುವುದಿಲ್ಲ.

ದಿನಾಂಕ:31-08-2017 ರಂದು ಮು.ಕಾ.ನಿ.ಅ. ಜಿಲ್ಲಾ ಪಂಚಾಯಿತಿ ಚಿತ್ರದುರ್ಗ ರವರ ಆದೇಶದ ವಿರುದ್ಧ ನಾನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು (WP.NO.44480/17(LB-RES) ದಿ:13-10-2017 ರಂದು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯವು ನನ್ನನ್ನು ಬುರುಜನರೊಪ್ಪ ಗ್ರಾ.ಪಂ. ಅಧ್ಯಕ್ಷೆ ಸ್ಥಾನದಿಂದ ಮಾನ್ಯ ಉಚ್ಚ ನ್ಯಾಯಾಲಯದ ವಿಶೇಷ ಅನುಮತಿ ಇಲ್ಲದೆ ತೆಗೆದು ಹಾಕದಂತೆ ಮಧ್ಯಂತರ ಆದೇಶ ನೀಡಿರುತ್ತದೆ" ಎಂದು ಮನವಿಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (4) ರನ್ವಯ ಶ್ರೀಮತಿ ಎಸ್.ಅಂಬಿಕಾ, ಅಧ್ಯಕ್ಷರು, ಬುರುಜನರೊಪ್ಪ ಗ್ರಾಮ ಪಂಚಾಯತಿ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ನ್ಯಾಯಾಲಯದಲ್ಲಿ ದಿನಾಂಕ: 21-12-2017 ರಂದು ಜರುಗಿದ ವಿಚಾರಣೆಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬುರುಜನರೊಪ್ಪ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿ ಅಧಿಕಾರಿಗಳು ಹಾಜರಿದ್ದರು. ಅಧ್ಯಕ್ಷರು ಹಾಜರಿರುವುದಿಲ್ಲ.

ಸರ್ಕಾರವು ಲಭ್ಯವಿರುವ ಎಲ್ಲಾ ಸಾಕ್ಷ್ಯಾಧಾರಗಳು ಮತ್ತು ದಾಖಲಾತಿಗಳನ್ನು ಪರಿಶೀಲಿಸಿ, ಆಪಾದಿತ ಅಧ್ಯಕ್ಷರು 02 ನವೆಂಬರ್ 2017 ರಿಂದ ಯಾವುದೇ ಸಭೆ ನಡೆಸದೇ, ಗ್ರಾಮ ಪಂಚಾಯಿತಿಯ ಕಾರ್ಯಕಲಾಪಕ್ಕೆ ಅಡ್ಡಿಯಾಗಿದ್ದು, ಯಾವುದೇ ರೀತಿಯಲ್ಲಿ ಕಾಮಗಾರಿಗಳು ಸಹ ನಡೆಸಲೂ ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಸದರಿ ಅಧ್ಯಕ್ಷರನ್ನು ಕರ್ತವ್ಯ ನಿರ್ಲಕ್ಷ್ಯತೆ ಹಾಗೂ ದುರ್ನಡತೆ ಸಾಬೀತಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಿ ಸದಸ್ಯತ್ವ ರದ್ದು ಆದೇಶಕ್ಕೆ ನ್ಯಾಯಾಲಯದ ಆದೇಶ ಕೋರಿ ನಂತರ ಜಾರಿಗೊಳಿಸಲು ಸರ್ಕಾರವು ನಿರ್ಣಯಿಸಿದೆ. ಅದರಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (5) ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯದ ರಿಟ್ ಅರ್ಜಿ ಸಂಖ್ಯೆ:44480/2017 ರಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ಅಂತಿಮ ಆದೇಶ ನೀಡಿ ಪ್ರಕರಣ ಮುಕ್ತಾಯಗೊಳಿಸಿರುತ್ತದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 708 ಗ್ರಾಪಂಅ 2017 ಬೆಂಗಳೂರು, ದಿನಾಂಕ:07-11-2018.**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ ಎಸ್.ಅಂಬಿಕಾ, ಅಧ್ಯಕ್ಷರು, ಬುರುಜನರೊಪ್ಪ ಗ್ರಾಮ ಪಂಚಾಯತಿ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರು 02 ನವೆಂಬರ್ 2017 ರಿಂದ ಯಾವುದೇ ಸಭೆ ನಡೆಸದೆ, ಗ್ರಾಮ ಪಂಚಾಯಿತಿಯ ಕಾರ್ಯಕಲಾಪಕ್ಕೆ ಅಡ್ಡಿಯಾಗಿದ್ದು, ಯಾವುದೇ ರೀತಿಯಲ್ಲಿ ಕಾಮಗಾರಿಗಳು ಸಹ ನಡೆಸಲೂ ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಸದರಿ ಅಧ್ಯಕ್ಷರನ್ನು ಕರ್ತವ್ಯ ನಿರ್ಲಕ್ಷ್ಯತೆ ಹಾಗೂ ದುರ್ನಡತೆ ಸಾಬೀತಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ಬುರುಜನರೊಪ್ಪ ಗ್ರಾಮ ಪಂಚಾಯತಿ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಿ ಸದಸ್ಯತ್ವವನ್ನು ರದ್ದುಪಡಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

7/11

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿ:

1) ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಚಿತ್ರದುರ್ಗ, ಚಿತ್ರದುರ್ಗ ಜಿಲ್ಲೆ.
3) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಹಿರಿಯೂರು, ಚಿತ್ರದುರ್ಗ ಜಿಲ್ಲೆ.

4) ಶ್ರೀಮತಿ ಅಂಬಿಕಾ, ಅಧ್ಯಕ್ಷರು, ಬುರುಜನರೊಪ್ಪ ಗ್ರಾಮ ಪಂಚಾಯತಿ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.
5) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಬುರುಜನರೊಪ್ಪ ಗ್ರಾಮ ಪಂಚಾಯತಿ, ಹಿರಿಯೂರು ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.
6) ಕಛೇರಿ ಪ್ರತಿ / ಹೆಚ್ಚುವರಿ ಪ್ರತಿ.
7) ಗಣಕ ಕೋಶ.

<u>ಪ್ರತಿಯನ್ನು ಮಾಹಿತಿಗಾಗಿ:</u>

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.